ಕೊರೆಯುವ ಕೆಲಸ ನಡೆಯುತ್ತಿಲ್ಲ. ಪಿ.ಎಲ್.ಇ. ಇಲಾಖೆಯಂವರನ್ನು ವಿಚಾರಿಸಿದಾಗ ಸರಕಾರದಿಂದ ಎಸ್.ಓ.ಸಿ. ಬಂದಿಲ್ಲ, ಮಂಗಳೂರು ವಿಭಾಗದಲ್ಲಿ ಕೊಳವೆ ಬಾವಿ ಕಂಟ್ರಾಕ್ಟ್‌ದಾರರಿಗೆ ಸುಮಾರು ೪೫ ಲಕ್ಷ ರೂಪಾಯಿಗಳ ಹಣ ಪಾವತಿ ಆಗಿಲ್ಲ ಎಂದು ತಿಳಿದು ಬರುತ್ತದೆ. ಇದು ನಿಜವೆ ? ಒಬ್ಬೊಬ್ಬ ಕಂಟ್ರಾಕ್ಟ್‌ದಾರರು, ಡಿಸೇಲ್‌ಬಿಲ್ಲು ತಲಾ ಒಂದೊಂದು ಲಕ್ಷ ಪಾವತಿ ಮಾಡಲು ಪೆಟ್ರೋಲು ಪಂಪುಗಳಲ್ಲಿ ಬಾಕಿ ಇರುವುದರಿಂದ ಕೆಲಸ ಎರಡು ತಿಂಗಳುಗಳಿಂದ ಸ್ಥಗಿತಗೊಂಡಿದೆ ಎಂದು ತಿಳಿಸುತ್ತಾರೆ. ಸುಳ್ಯ ವಿಧಾನ ಸಭಾ ಕ್ಷೇತ್ರದ ಸುಳ್ಯ ತಾಲ್ಲೂಕಿನಲ್ಲಿ ೩೫ ಕೊಳವೆ ಬಾವಿಗಳು ಮಂತ್ತು ಪುತ್ತೂರು ತಾಲ್ಲೂಕಿನ ಭಾಗದಲ್ಲಿ ೧೫ ಕೊಳವೆ ಬಾವಿಗಳು ಕೊರೆಯಲು ಬಾಕಿ ಇದ್ದು ರಿಪೇರಿ ಕೆಲಸ ಕೂಡ ಬಾಕಿ ಇರುವುದರಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಅಭಾವ ಉಂಟಾಗಿದೆ. ಆದುದರಿಂದ ಕೊಳವೆ ಬಾವಿಗಳ ರಿಪೇರಿ ಹಾಗೂ, ಕೊರೆಯಂವ ಕೆಲಸವನ್ನು ಕೂಡಲೇ ಕೈಗೆತ್ತಿಕೊಂಡು, ಕುಡಿಯುವ ನೀರಿನ ಸವಂಸ್ಯೆಗಳನ್ನು ನೀಗಿಸುವಂತೆ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.–ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ಆರ್.ಡಿ.ಪಿ.ಆರ್ ಮಂತ್ರಿಗಳವರ ಗಮನಕ್ಕೆ ತರುತ್ತೇನೆ.

6. ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ನಡೆಸಿರುವ ದೌರ್ಜನ್ಯ ಮತ್ತು ದಬ್ಬಾಳಿಕೆ

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.— ಬೆಂಗಳೂರು ಮಹಾ ನಗರಪಾಲಿಕೆಯ ಕೆಲವು ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳ ಮೇಲೆ ದೌರ್ಜನ್ಯ ಮತ್ತು ದಬ್ಬಾಳಿಕೆ ನಡೆಸಿದ್ದಾರೆ. ದಿನಾಂಕ ೩–೩–೧೯೮೭ ರಂದು ನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರ ಅಧಿಕೃತ ಕಛೇರಿಗೆ ನುಗ್ಗಿ ಅಲ್ಲಿಯ ಸಾರ್ವಜನಿಕರನ್ನು ಓಡಿಸಿ ಬೀಗ ಮುದ್ರೆಯನ್ನು ಹಾಕಿರುವುದು. ದಿನಾಂಕ ೨೭–೨–೧೯೮೭ ರಂದು ಮಹಾ ನಗರಪಾಲಿಕೆ ಜನತಾ ಪಕ್ಷದ ಸದಸ್ಯರು ಸಭೆಯಲ್ಲಿ ನಿರ್ಣಯವನ್ನು ತಂದು ನಗರ ಪಾಲಿಕೆಯ ಪ್ರತಿಪಕ್ಷದ ನಾಯಕರಾಗಲು ಅರ್ಹತೆಯುಳ್ಳ ಸದಸ್ಯರ ಬೆಂಬಲವನ್ನು ಪಡೆದಿದ್ದಾಗ್ಯೂ, ನಿರ್ಣಯವನ್ನು ತಂದು ಎಲ್ಲಾ ಅರ್ಹತೆಯನ್ನು ಪಡೆದಿರುವ ವಿರೋಧ ಪಕ್ಷದ ನಾಯಕತ್ವವನ್ನು ಅನೂರ್ಜಿತಗೊಳಿಸಿರುವುದು ಸರಿಯಾದುದಲ್ಲ. ಇದರ ಬಗ್ಗೆ ನಗರಾಭಿವೃದ್ಧಿ ಸಚಿವರು ಸದನದಲ್ಲಿ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ವಿಷಯವನ್ನು ತಂದು ಸೂಕ್ತ ಕ್ರಮ ತೆಗೆದುಕೊಂಡ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕಿಯವರಿಗೆ ತಿಳಿಸುವ ಏರ್ಪಾಡು ಮಾಡುತ್ತೇನೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.— ಅಧ್ಯಕ್ಷರೇ. ಇಷ್ಟು ಸುಲಭವಾಗಿ ಇದನ್ನು ನಿಭಾಲ್ ಮಾಡುವುದಕ್ಕಾಗುವುದಿಲ್ಲ, ಸಂಬಂಧಪಟ್ಟ ಮಂತ್ರಿಯವರು ಇಲ್ಲಿ ಈ ವಿಷಯಕ್ಕೆ ಉತ್ತರಿಸ ಬೇಕು. ಅವರ ಬದಲಾಗಿ ಮಾನ್ಯ ಕಂದಾಯ ಸಚಿವರು ತಿಳಿಸುತ್ತೇನೆ ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.— ಮಾನ್ಯ ಸಚಿವರು ಕೌನ್ಸಿಲ್‌ನಲ್ಲಿ ಇದ್ದಾರೆ. ಅವರ ಪರವಾಗಿ ಮಾನ್ಯ ಕಂದಾಯ ಸಚಿವರು ನಿಮಗೆ ಉತ್ತರ ದೊರಕಿಸುವ ವಿಚಾರವನ್ನು ಹೇಳಿದ್ದಾರೆ. ೩೫ಳಿರ ಮಿತಿಯಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ. ಇಂತಹ ಒಂದು ಅವಕಾಶವನ್ನು ಎಲ್ಲರಿಗೂ ವಿಧಾನ ಸಭೆಯಲ್ಲಿ ಇಟ್ಟಿದ್ದೇವೆ. ಅದು ತಮಗೆ ತಿಳಿದಿದೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದು ಮುಖ್ಯವಾದಂತಹ ವಿಚಾರ. ಮಾನ್ಯ ಕಂದಾಯ ಸಚಿವರು ಕೂಡ ಉತ್ತರವನ್ನು ಇಲ್ಲಿ ಕೊಡಬಹುದು.

ಅಧ್ಯಕ್ಷರು.— ಹೀಗೆ ಮಾತನಾಡುವುದು ಸರಿಯಲ್ಲ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಲ್ಲಿ ಒಬ್ಬ ಚುನಾಯಿತ ಸದಸ್ಯರ ಗತಿ ಇದಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.— ನಾಳೆ ತಾವುಗಳು ಭಾಷಣ ಮಾಡುವ ಸಂದರ್ಭದಲ್ಲಿ ಮಾತನಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಗರ ಸಭೆಯ ವಿರೋಧಿ ಪಕ್ಷದಲ್ಲಿ ಒಬ್ಬ ಚರ್ಚಾಯಿತರಾದ ವರಿಗೆ, ಅವರ ಸೌಲಭ್ಯಗಳನ್ನು ತೆಗೆದಂಹಾಕುವುದು, ಫೋನ್ ಸೌಲಭ್ಯವನ್ನು ಕಿತ್ತು ಹಾಕುವುದು. ಬೀಗ ಹಾಕಂವುದು, ಇತ್ಯಾದಿಯಾಗಿ ಮಾಡಿದರೆ ಹೇಗೆ ? ಸೂಕ್ತ ಕ್ರಮಗಳನ್ನು ಜರಗಿಸುವ ವಿಧಾನಗಳಂ ಅನಿವಾರ್ಯವಾದಲ್ಲಿ ಬೇರೆ ವಿಧಾನಗಳಂ ಇವೆ.....

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಬೇಕು. ಹೀಗೆ ತಾವುಗಳಂ ಮಾತನಾಡಿದರೆ ರಿಕಾರ್ಡಿಗೆ ಹೋಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ತಾವುಗಳು ಉಪ–ನಾಯಕರಾಗಿ ಉಳಿದವರಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಸಂಬಂಧಪಟ್ಟ ಮಾನ್ಯ ಸಚಿವರು ಕೌನ್ಸಿಲ್‌ಗೆ ಹೋಗಿರುವುದರಿಂದ ಹೀಗೆ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಾಗಾದರೆ ಈ ವಿಷಯವನ್ನು ಆನಂತರ ಸಚಿವರು ಬಂದ ಮೇಲೆ ತೆಗೆದುಕೊಳ್ಳಿ....

ಅಧ್ಯಕ್ಷರು.— ಯಾವ ರೂಲ್ಸ್ ಪ್ರಕಾರ ಮಾಡಬೇಕೆಂದು ತಾವುಗಳೇ ಹೇಳಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದನ್ನು ಕನ್‌ವರ್ಟ್ ಮಾಡಿ.....

ಅಧ್ಯಕ್ಷರು.— ತಾವುಗಳು ಸದನಕ್ಕೆ ಹೊಸಬರು ಅಲ್ಲ. ರೂಲ್ ೩೩ಳಿರ ಬಗ್ಗೆ ನಾನು ತಮಂಗೆ ಹೇಳಬೇಕಾಗಿಲ್ಲ. ೩೩ಳಿರ ಪ್ರಕಾರ ಅವಕಾಶ ಸಿಕ್ಕಿದರೆ ಅದರ ವಿಂತಿ ಏನೆಂಬುದು ತಮಗೆ ಗೊತ್ತಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೩೩ಳಿರಲ್ಲಿ ಅವಕಾಶ ಇಲ್ಲದಿದ್ದರೆ, ಇದನ್ನು ನಿಯಮ ೬೮ಕ್ಕೆ ಪರಿವರ್ತಿಸಿ ಅವಕಾಶ ಮಾಡಿಕೊಡಿ.....

೧–೦೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಂದ ತಕ್ಷಣ ಉತ್ತರ ಕೊಡಿಸಿ, ಪರವಾಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೊಂದು ಮಹತ್ವದ ಪ್ರಶ್ನೆ. ಜನತಂತ್ರದಲ್ಲಿ ವಿರೋಧ ಪಕ್ಷದ ನಾಯಕರಿಗೆ ಸಲ್ಲತಕ್ಕ ಹಕ್ಕು ಗೌರವಗಳಿಗೆ ಚ್ಯುತಿ ಬರಬಾರದು. ಅಷ್ಟೇ ಜವಾಬ್ದಾರಿ ವಿರೋಧ ಪಕ್ಷದ ನಾಯಕರ ಮೇಲೂ ಇದ್ದು ಅವರು ಕಾನೂನು ಬದ್ಧವಾದ ಸತ್ಸಂಪ್ರದಾಯಗಳನ್ನು ಕಾಪಾಡುವ ಜವಾಬ್ದಾರಿ ಹೊತ್ತಿರುತ್ತಾರೆ. ಈ ವಿಷಯದ ಬಗ್ಗೆ ನಗರಾಭಿವೃದ್ಧಿ ಮಂತ್ರಿಗಳಿಂದ ಸೋಮವಾರದ ದಿವಸ ಉತ್ತರ ಕೊಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೋಮವಾರ ತುಂಬಾ ಲೇಟಾಗುತ್ತದೆ. ಈಗ ಬೇಡ ; ಬೇಕಾದರೆ ಇವತ್ತೇ ೩ ಗಂಟೆಗೆ ಉತ್ತರ ಕೊಡಿ,

ಅಧ್ಯಕ್ಷರು.— ೩ ಗಂಟೆಗೆ ತೆಗೆದುಕೊಳ್ಳಲು ಇದು ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಆಯಿತು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅವರು ಮಾತನಾಡಂವುದು ಯಾವ ರೂಲ್ ಕೆಳಗೆ ಬರುತ್ತದೆ ?

ಶ್ರೀ ಆರ್. ಎಲ್. ಜಾಲಪ್ಪ.—ಅದೊಂದು ಅಟಾನಮಸ್ ಬಾಡಿ. ಹಿಂದೆ ದೇವರಾಜ ಅರಸರ ಕಾಲದಲ್ಲಾದಂತೆ ಇಷ್ಟ ಬಂದಂತೆ ಡಿಫೆಕ್ಟ್ ಮಾಡಿಸಿ ಮಾಡಿಸಿ ಹಾಳಾಯ್ತು. ಈಗ ಅದೇ ರೀತಿ ಇವರು ಮಾಡಿಕೊಂಡಿದ್ದಾರೆ, ನಾವೇನು ಮಾಡಕಾಗುತ್ತೆ ಅದಕ್ಕೆ ?

ಶ್ರೀ ಕೆ. ಎಸ್. ನಾಗರತ್ನಮ್ಮ.—ಯಾರು ಹೇಳಿದ್ದು ನಿಮಗೆ ಅಲ್ಲಿ ಡಿಫೆಕ್ಷನ್ ಆಗಿದೆ ಅಂತ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಫೆಕ್ಷನ್ ಆಗಿದ್ದರೆ ಸಂಖ್ಯಾಬಲ ಕಡಿಮೆಯಾಗಿ ಡಿರೆಕಗ್ನೈಸ್ ಆಗುತ್ತದೆ. ಬಹುಮತ ಯಾರಿಗೆ ಇದೆಯೋ ಅವರಿಗೆ ಕೊಡಬೇಕು.

7. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ಬಾಳಗಡಿಯಲ್ಲಿ ತೆರೆಯುವುದು.

† ಶ್ರೀ ಹೆಚ್. ಜಿ. ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಕೊಪ್ಪ ತಾಲ್ಲೂಕಿನಲ್ಲಿ ಕೊಪ್ಪ ಟೌನಿಂದ ಬಾಳಗಡಿಯು ಸುಮಾರು ೩ ಕಿ. ಮೀ. ದೂರದಲ್ಲಿರುತ್ತದೆ. ಇದು ಬಿಂತರವಳ್ಳಿ ಮಂಡಲ ಪಂಚಾಯಿತಿಗೆ ಸೇರಿದ್ದು ಇಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳೂ ಕೇಂದ್ರೀಕೃತವಾಗಿದ್ದು ಸರ್ಕಾರಕ್ಕೆ ಹಣ ಪಾವತಿ ಮಾಡಬೇಕಾದಲ್ಲಿ ಬಾಳಗಡಿಯ ಖಜಾನೆ ಇಲಾಖೆಯಿಂದ ಕೌಂಟರ್ ಸಹಿ ಮಾಡಿಸಿಕೊಂಡು ಹಣ ಕಟ್ಟಲು ಕೊಪ್ಪ ಟೌನ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಹೋಗಿ ಬರಲು ೧೦ ರೂ. ಆಟೋ ಚಾರ್ಜ್ ತೆರಬೇಕಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಬಾಳಗಡಿಯಲ್ಲಿರುವ ತಾಲ್ಲೂಕ್ ಆಫೀಸಿನಲ್ಲಿಯೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ತೆರೆಯಲು ಸರ್ಕಾರ ಏಕೆ ಶೀಘ್ರ ಕ್ರಮ ಕೈಗೊಳ್ಳಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ತಂದಾ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಂತ್ತೇನೆ.

8. ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಆರ್. ವೆಂಕಟರಾವಯ್ಯ,—ಮಾನ್ಯ ಅಧ್ಯಕ್ಷರೇ, ಕರ್ನಾಟಕಾದ್ಯಂತ ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರು ಮುಷ್ಕರ ಹೂಡಲು ನೋಟೀಸ್ ಕೊಟ್ಟಿದ್ದಾರೆ. ಎಲ್ಲಾ ಪಟ್ಟಣಗಳ ಕುಡಿಯುವ ನೀರು ಸರಬರಾಜು ನಿಲ್ಲುವ ತೊಂದರೆಯಿದೆ.

ಹೋದ ಸಲ ಮುಷ್ಕರ ಮಾಡಿದಾಗ ಮುಷ್ಕರದ ದಿನವನ್ನು ರಜಾ ಎಂದು ಘೋಷಿಸಿಲ್ಲ, ಬಡ್ತಿ ಕೊಟ್ಟಿಲ್ಲ, ಎಲ್ಲರನ್ನೂ ಖಾಯಂ ಮಾಡಿಲ್ಲ. ಸಾವಿರಾರು ಕಾರ್ಮಿಕರನ್ನು ದಿನಕೂಲಿ ಕಾರ್ಮಿಕರೆಂದೇ ತೀರ್ಮಾನಿಸಿ ವರ್ಕ್‌ಚಾರ್ಜ್ ಕೆಲಸಗಾರರೆಂದು ಆಜ್ಞೆ ಮಾಡಿಲ್ಲ. ೧-೧-೧೯೬೬ರಿಂದ ಅವರನ್ನು ಖಾಯಂ ಮಾಡಲು ಒಪ್ಪಿದ್ದರೂ ಖಾಯಂ ಮಾಡಿಲ್ಲ. ಸಮಾನ ಕೆಲಸಕ್ಕೆ ಸಮಾನವೇತನ ತತ್ವಕ್ಕೆ ಕೊಡಲೊಪ್ಪಿದ್ದರೂ, ಸರ್ವೋಚ್ಚ ನ್ಯಾಯಾಲಯ ತಾ : ೧೭-೧-೧೯೬೬ರ ಆರ್ಡರ್ ಅನುಸರಿಸಿ ಅವರಿಗೆ ನೀಡಬೇಕಾದ ಅನುಕೂಲ ಕೊಟ್ಟಿಲ್ಲ. ೩-೪-೧೯೬೬ರ ಆರ್ಡರನ್ನು ಜಾರಿಗೊಳಿಸಿಲ್ಲ. ಸರ್ಕಾರ ತನ್ನ ಮಾತಿನ ಪ್ರಕಾರ ಇದನ್ನು ನಡೆಸಿಕೊಟ್ಟು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಈ ಪ್ರಸ್ತಾವನೆಯನ್ನು ಸದನದ ಮುಂದೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಕೂಡಲೇ ನೆರವು ತೆಗೆದುಕೊಳ್ಳುವಂತೆ ಹೇಳುತ್ತೇನೆ.

9. ಬೆಂಗಳೂರಿನ ಎಪಿ ಎಂಸಿ ಮಾರುಕಟ್ಟೆಯಲ್ಲಿ ಹಣ್ಣು ವ್ಯಾಪಾರಸ್ಥರು ಹಾಗೂ ಕಮಿಷನ್ ಏಜೆಂಟರು ಮುಷ್ಕರದ ಬೆದರಿಕೆ ಹಾಕಿರುವುದು.

† ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ಎಪಿ ಎಂಸಿ ಮಾರುಕಟ್ಟೆ ಕಲಾಸಿಪಾಳ್ಯದಲ್ಲಿರುವ ಹಣ್ಣು ವ್ಯಾಪಾರ ಮಾಡುವವರೂ, ಕಮಿಷನ್ ಏಜೆಂಟರೂ ಒಂದಾಗಿ ಸೇರಿ ಮುಷ್ಕರ ಹೂಡುವ ಬೆದರಿಕೆ ಹಾಕಿದ್ದಾರೆ. ಹಣ್ಣು ಮತ್ತು ತರಕಾರಿ ಬೆಳೆಗಾರರಿಂದ ಕಮಿಷನನ್ನು ಪಡೆಯಕೂಡದೆಂದು ಆಜ್ಞೆ ಇದ್ದರೂ ಸಹ ಇದಕ್ಕೆ ವಿರೋಧವಾಗಿ ಈ ಕಮಿಷನ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.